

ಹೊರಗುಡ್ಡ ಗುಹಾಂತರ ದೇವಾಲಯದ ಒಳಕೋಟೆಯ ದೃಶ್ಯ.

ಮತ್ತು ಅಜಂತಾದ ಗುಹಾಂತರ ದೇವಾಲಯಗಳನ್ನು ನೆನಪಿಸುತ್ತದೆ. ದೇವಾಲಯದ ನಡುವೆ ನಾಲ್ಕು ಕಂಬಗಳು ನಿಂತಿದ್ದರೆ, ಆರು ಅಂಕಣಗಳ ನವರಂಗದ ಸುತ್ತ ಬದಿಗೆ ಅಂಟಿಕೊಂಡು ಎಂಟು ಕಂಬಗಳಿವೆ. ಕಂಬಗಳ ಮೇಲೆ ಬೊದಗೆ ತೊಲೆ, ಬಾಗಿಲುವಾಡ, ಕಂಬಪೀಠ, ಗರ್ಭ ಗುಡಿಯ ಮೆಟ್ಟಿಲು ಎಲ್ಲವೂ ನೋಡುಗರ ಕಣ್ಮನ ಸೆಳೆಯುತ್ತವೆ.

ಎಲ್ಲಾ ಕಂಬಗಳು ಮತ್ತು ಅಂಕಣಗಳಲ್ಲಿ ಸಿಂಹ, ನರಸಿಂಹ, ರಾಕ್ಷಸ, ಬೇಡರ ಕಣ್ಣಪ್ಪ, ಕಮಲ, ಹಂಸ, ರಥಗಳು, ಗರುಡ, ಗಂಡಭೇರುಂಡ, ಗೂಳಿ, ಜಿಂಕೆಯ ಚಿತ್ರ, ಆನೆಗಳು, ಗಣಪತಿ, ನಟರಾಜ, ವಿಷ್ಣು ಅವತಾರಗಳು, ಬ್ರಹ್ಮ, ವಿಷ್ಣು ಮಹೇಶ್ವರ, ನಂದಿ, ಕೃಷ್ಣಮೃಗ ಇತ್ಯಾದಿಗಳ ಸುಂದರ ಕೆತ್ತನೆಗಳಿವೆ. ಬೋದಿಗೆಯಲ್ಲಿ ಬಾಳೆಯ ಹೂವಿನ ಚೂಪ್ರತುದಿಯನ್ನು ಹೋಲುವ ರಚನೆ ಮೇಲೆ ಸುತ್ತ ಬಳ್ಳಿಯ ಹೂವು, ಅಷ್ಟದಿಕ್ಪಾಲಕರು, ಕಾಳಿ ಹಾಗೆಯೇ ಶರಭಸ್ವಾಮಿ, ಗಣಪತಿ ಇತ್ಯಾದಿ ರಚನೆಗಳನ್ನು ಕಾಣಬಹುದು. ಗುಹಾಂತರ ದೇವಾಲಯಗಳಲ್ಲಿ ಕೆತ್ತನೆಯನ್ನು ಬಾದಾಮಿಯ ಸಾಣೆಕಲ್ಲು ಜಾತಿಯ ಬಂಡೆಯಲ್ಲಿ ಮಾಡುವುದಕ್ಕಿಂತ, ಇಲ್ಲಿನ ಗ್ರಾನೈಟ್ ಮಾದರಿ ಜಾತಿಯ ಕಲ್ಲಿನಿಂದ ಮಾಡುವುದು ಅತ್ಯಂತ ಕಠಿಣವೇ ಸರಿ.

ರಾಮದುರ್ಗ ಕೋಟೆ ವೈಶಿಷ್ಟ್ಯ: ಈ ಹೊಸಗುಡ್ಡ ಕೋಟೆಯು ಎರಡು ಸುತ್ತಿನ ಕೋಟೆಯಾಗಿದ್ದು, ಈ ಕೋಟೆಯ ಗೋಡೆಗಳನ್ನು ದೊಡ್ಡ ಕಲ್ಲು ದಿಮ್ಮಿಗಳನ್ನು ಒಗ್ಗೂಡಿಸಿ ನಿರ್ಮಿಸಲಾಗಿದೆ. ಯಾವುದೇ ಗಾರೆ, ಸಿಮೆಂಟ್ ಬಳಸದೆಯೇ ಮಣ್ಣಿನಿಂದ ಕಟ್ಟಿರುವುದು ವೈಶಿಷ್ಟ್ಯ. ಗುಡ್ಡದಲ್ಲಿರುವ ತಗ್ಗು ದಿಣ್ಣೆಗಳಿಗೆ ತಕ್ಕಂತೆ ಕೋಟೆಯ ಮೇಲೆ ಅಲ್ಲಲ್ಲಿ ನಿಯಮಿತ ಅಂತರದಲ್ಲಿ ನಾನಾ ವಿವಿಧ ಆಕೃತಿಯ ಬರುಜುಗಳನ್ನು (ಗಾರೆ) ಕಟ್ಟಿದ್ದಾರೆ.

ಹೊರ ಕೋಟೆಯ ಗೋಡೆಯನ್ನು ದೊಡ್ಡ ಕಲ್ಲು ದಿಮ್ಮಿಗಳಿಂದ ನಿರ್ಮಿಸಿದ್ದು, ಬಹುತೇಕ ಭಾಗವನ್ನು ಗುಡ್ಡದಲ್ಲಿರುವ ತಂಗು ದಿಣ್ಣೆಗಳಿಗೆ ಹೊಂದಿಕೊಳ್ಳುವಂತೆ ನಿರ್ಮಿಸಲಾಗಿದೆ. ಮೊದಲನೆಯ ಕೋಟೆಯ ಉತ್ತರ ಮತ್ತು ದಕ್ಷಿಣಕ್ಕೆ ಎರಡು ಬಾಗಿಲುಗಳಿವೆ. ಕೋಟೆ ಸುಮಾರು 20ರಿಂದ 30 ಅಡಿಯಷ್ಟು ಎತ್ತರವಿದೆ. ಸುಮಾರು 15ರಿಂದ 20 ಎಕರೆ ಪ್ರದೇಶವನ್ನು ಆವರಿಸಿದೆ. ಮೊದಲನೆ ಕೋಟೆಯ ಆವರಣದಲ್ಲಿಯೇ ಗುಹಾಂತರ ದೇವಾಲಯ ಇದೆ.



ಕಂಭಗಳಲ್ಲಿ ಕಲೆ

